ಸಂಪಾದಕತ್ವದಲ್ಲಿ, ಕೆ.ವಿ. ಸುಬ್ಬಣ್ಣನವರ 'ಅಕ್ಷರ ಪ್ರಕಾಶನ'ದಿಂದ ಪ್ರಕಟವಾಗುತ್ತಿದ್ದ 'ಸಾಕ್ಷಿ' ಎಂಬ ತ್ರೈಮಾಸಿಕವನ್ನು ಓದುವುದು ಒಂದು ಹೆಮ್ಮೆಯ ವಿಷಯವಾಗಿತ್ತು. ಈ ಸಾಹಿತ್ಯ ಪತ್ರಿಕೆಯಲ್ಲಿ ಗಂಭೀರ ವಿಮರ್ಶೆಗಳ ಜೊತೆಗೆ ಅನೇಕರು ಅತ್ಯುತ್ತಮವೆಂದು ಭಾವಿಸಿದ್ದ ಕವಿತೆಗಳು ಪ್ರಕಟವಾಗುತ್ತಿದ್ದವು. 'ಸಾಕ್ಷಿ'ಯಲ್ಲಿ ಬರಹವೊಂದು ಪ್ರಕಟವಾದರೆ ಅದೊಂದು ಅಪೂರ್ವ ಮನ್ನಣೆಯೆಂಬ ಭಾವನೆಯು ಯುವಸಾಹಿತಿಗಳಲ್ಲಿತ್ತು. ವಿಚಿತ್ರವೆಂದರೆ ಸಂಪಾದಕರ ಕವಿತೆಗಳಿಗೂ ಅದೇ ತ್ರೈಮಾಸಿಕದಲ್ಲಿ ವಿಮರ್ಶಾ ಲೇಖನಗಳು ಪ್ರಕಟವಾಗುತ್ತಿದ್ದವು. ಇಲ್ಲಿ ನೈತಿಕ ಪ್ರಶ್ನೆಯೊಂದು ಕಾಡಲಿಲ್ಲವೆ ಎಂಬ ಪ್ರಶ್ನೆ ನನ್ನನ್ನು ಕಾಡಿದ್ದಂತೂ ನಿಜ. ಹೀಗೆ ಸಾಗುತ್ತಿದ್ದ 'ಸಾಕ್ಷಿ'ಯಲ್ಲಿ ಯು.ಆರ್. ಅನಂತಮೂರ್ತಿಯವರ ಒಂದು ಲೇಖನ ಪ್ರಕಟವಾಯಿತು. ಅದು 'ಗಿರಿ' ಎಂಬ ಲೇಖಕರು ಬರೆದ 'ಗತಿಸ್ಥಿತಿ' ಎಂಬ ಕಾದಂಬರಿಯನ್ನು ಕುರಿತ ಲೇಖನ. ಗಿರಿಯವರು ವಿದೇಶದಲ್ಲಿದ್ದರೆಂಬ ನೆನಪು, ಅವರ ಈ ಕಾದಂಬರಿಯನ್ನು ಅನನ್ಯವೆಂಬಂತೆ ಪ್ರಶಂಸಿಸಿದ ಲೇಖನವನ್ನು ಓದಿಯಾದ ಮೇಲೆ ಕಾದಂಬರಿಯನ್ನು ಓದಲೇಬೇಕೆಂಬ ಹಂಬಲ ಹೆಚ್ಚಾಯಿತು. ಆಗ ನನ್ನ ಹಂಬಲಕ್ಕೆ ಎದುರಾದ 'ಗತಿ' ಮತ್ತು 'ಸ್ಥಿತಿ' ವಿಚಿತ್ರವಾದರೂ ಸತ್ಯವಾಗಿತ್ತು. ತುಮಕೂರು ಮತ್ತು ಬೆಂಗಳೂರುಗಳಲ್ಲಿ ಎಲ್ಲಾ ಪುಸ್ತಕದ ಅಂಗಡಿಗಳಲ್ಲಿ ಹುಡುಕಿದರೂ ಆ ಕಾದಂಬರಿ ಲಭ್ಯವಾಗಲಿಲ್ಲ. ಯಾಕೆಂದರೆ ಅದು ಪ್ರಕಟವಾಗಿರಲೇ ಇಲ್ಲ. ಕಾದಂಬರಿಯ ಪ್ರಕಟಣೆಗೆ ಮುಂಚೆಯೇ ಪ್ರಶಂಸೆಯ 'ವಿಮರ್ಶೆ'ಯು ಶ್ರೇಷ್ಠತೆಗೆ 'ಸಾಕ್ಷಿ' ಒದಗಿಸಿತ್ತು. ಪ್ರಕಟವಾದಾಗ ಗೊತ್ತಾಯಿತು, ಅನಂತಮೂರ್ತಿಯವರ ಲೇಖನ 'ಗತಿಸ್ಥಿತಿ' ಕಾದಂಬರಿಯ ಮುನ್ನುಡಿಯಾಗಿತ್ತು! ಮುನ್ನುಡಿಯು ಮುನ್ನವೇ ನುಡಿದಿತ್ತು! ನಿಜವೆಂದರೆ 'ಗತಿಸ್ಥಿತಿ' ಕಾದಂಬರಿ ಒಂದು ಹೊಸ ಅನುಭವ ನೀಡುವ ಕೃತಿಯಾಗಿತ್ತು. ಕೆಟ್ಟ ಕೃತಿಯಾಗಿರಲಿಲ್ಲ. ಆದರೆ, ಎ.ಕೆ. ರಾಮಾನುಜನ್ ಮತ್ತು ಗಿರಿಯವರಿಗೆ ಸಿಕ್ಕಿದ 'ವಿಮರ್ಶೆ ಭಾಗ್ಯ' ಎಷ್ಟು ಜನರಿಗೆ ಸಿಗುತ್ತದೆಯೆಂಬ ಪ್ರಶ್ನೆ ನನ್ನಲ್ಲಿ ಇನ್ನೂ ಇದೆ. ಈ ಪ್ರಶ್ನೆಯು ಖಂಡಿತ ಇವರಿಬ್ಬರ ಪ್ರತಿಭೆಯನ್ನು ಕುರಿತಾದುದಲ್ಲ. ವಿಮರ್ಶೆಯ ವಿದ್ಯಮಾನವನ್ನು ಕುರಿತದ್ದು; ಶ್ರೇಷ್ಠತೆಯ ಮಾನದಂಡಗಳ ಬಗ್ಗೆ ಮೂಡುವ ಗುಮಾನಿಗೆ ಸಂಬಂಧಿಸಿದ್ದು.

ಹೆಚ್ಚೂ ಕಡಿಮೆ ಇದೇ ಸನ್ನಿವೇಶದಲ್ಲಿ ಕುವೆಂಪು ಅವರ ಮಹಾಕಾವ್ಯವನ್ನು ಕುರಿತ ವಿಮರ್ಶೆಯ 'ವಿದ್ಯಮಾನ'ವೊಂದು ಜರುಗಿತು. ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ' ಒಂದು ಮಹಾಕಾವ್ಯವೇ? ಕುವೆಂಪು ಮಹಾಕವಿಯೇ? ಈ ಪ್ರಶ್ನೆಗಳನ್ನು ಸ್ವಯಂ ಹಾಕಿಕೊಂಡವರು ಕುವೆಂಪು ಮತ್ತು ಬೇಂದ್ರೆಯವರ ಕಾವ್ಯತುಲನೆಯಲ್ಲಿ ತೊಡಗಿದರು. ಈ ಇಬ್ಬರದೂ ವಿಭಿನ್ನ ಅಭಿವ್ಯಕ್ತಿ ವಿಧಾನವಾಗಿರುವಾಗ ತುಲನೆಯ ಅನಿವಾರ್ಯವೇನೂ ಇರಲಿಲ್ಲ. ಆದರೆ, ಮಹಾಕಾವ್ಯ ಬರೆದವರು ಮಹಾಕವಿಯೆ ಅಲ್ಲವೆ? ಅದು ನಿಜವಾಗಿಯೂ ಮಹಾಕಾವ್ಯವೆ? ಎಂಬ ಗುಮಾನಿಗಣ್ಣಿನ ಗಣ್ಯರು ತಕರಾರು ತೆಗೆದರು. ಈ ತಕರಾರಿಗೆ ಬಳಕೆಯಾದದ್ದು ಗಂಭೀರ ವಿಮರ್ಶೆ ಮತ್ತು ವಿಶ್ಲೇಷಣೆಯ ವಿಧಾನ. ಪ್ರಾತಿನಿಧಿಕವಾಗಿ ಖ್ಯಾತ ವಿಮರ್ಶಕರಾದ ಕೀರ್ತಿನಾಥ ಕುರ್ತಕೋಟಿಯವರು 'ಮನ್ವಂತರ'ವೆಂಬ ಅನಿಯತಕಾಲಿಕದಲ್ಲಿ ಬರೆದ ದೀರ್ಘ ಲೇಖನವನ್ನು ಉದಾಹರಿಸಬಹುದು. 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯವಲ್ಲವೆಂದು ಸಾಬೀತುಪಡಿಸುವ ಒಂದು ಪ್ರಯತ್ನವಾಗಿ ಈ ಲೇಖನ ರೂಪುಗೊಂಡಿತ್ತು. ಮಹಾಕಾವ್ಯವಲ್ಲವೆಂದ ಮೇಲೆ 'ಮಹಾಕವಿ'ಯಾಗಲು ಹೇಗೆ ಸಾಧ್ಯವೆಂಬ ಒಳಪ್ರಶ್ನೆಯೂ ಇತ್ತು. ಆದರೆ, ಕುವೆಂಪು ಅವರು ಮಹಾಕಾವ್ಯವೊಂದನ್ನೇ ಬರೆದಿರಲಿಲ್ಲ. ಮಹಾಕಾವ್ಯ ಬರೆಯುವ ವೇಳೆಗೆ ಅವರು ಪ್ರಸಿದ್ಧ ಕವಿಯಾಗಿದ್ದರು. ಮಹಾಕವಿಯೆನ್ನುವುದು 'ಶ್ರೇಷ್ಠ' ಸ್ಥಾನಮಾನವೆಂದು ಜನರು ಭಾವಿಸುವುದರಿಂದ ಅದನ್ನು ಅಲ್ಲವೆನ್ನುವ ಪ್ರಯತ್ನ ನಡೆದಂತೆ ಕಾಣುತ್ತದೆ. ಆದರೆ, ಅದು ಬೀಸು ಹೇಳಿಕೆಯಾಗದೆ ಗಂಭೀರ ತಾತ್ವಿಕ ವಿಶ್ಲೇಷಣೆಯ ರೂಪದಲ್ಲಿ ಹೊರಬಂದಿದೆ. ಹಾಗಾದರೆ ಮಹಾಕವಿ ಯಾರು? ವರಕವಿ ಬೇಂದ್ರೆಯವರು ಮಹಾಕವಿಯೆಂಬ ಅಭಿಪ್ರಾಯವನ್ನು ದೃಢಗೊಳಿಸುವ ಮೌಖಿಕ ಮತ್ತು ಲಿಖಿತ ಪ್ರಯತ್ನಗಳೂ ನಡೆದಿವೆ. ಬೇಂದ್ರೆಯವರನ್ನು ಮಹಾಕವಿ ಎನ್ನಲು ಕುವೆಂಪು ಅವರದು ಮಹಾಕಾವ್ಯವಾಗಿಲ್ಲ ಎಂದು ಹೇಳಬೇಕೆ?